## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್–76ರಲ್ಲಿ ದಿನಾಂಕ: 17–04–2021 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ–76 ಗಾಯತ್ರಿನಗರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 17–04–2021 ರಂದು ವಾರ್ಡ್ ಸಂಖ್ಯೆ: 76ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್–76 ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್–76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀಮತಿ ಶಾರದಾ ಬಾಯಿ, |
| | ಶ್ರೀ ಬಿ.ಜಿ ಕೃಷ್ಣಮೂರ್ತಿ, ಪಿ.ಎಸ್.ಐ |
| 5 | ಶ್ರೀ ಕೆ ಗೋವಿಂದರಾಜು, ಸ್ಯಾನಿಟರಿ ದಫೇದರ್, ಬಿಬಿಎಂಪಿ |
| 6 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 7 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 8 | ಶ್ರೀ ಪಿ.ವೆಂಕಟೇಶ್, ಎಲೆಕ್ಟ್ರೀಕಲ್ ಗುತ್ತಿಗೆದಾರರು |
| 9 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀಮತಿ ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 11 | ಶ್ರೀ ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 12 | ಶ್ರೀ ಪ್ರದೀಪ್, ಮೇಲ್ವಿಚಾರಕರು |
| 13 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 14 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್‌ಎಸ್‌ಬಿ |
| 15 | ಶ್ರೀ ಕೊಂಡಯ್ಯ, ಆರೋಗ್ಯ ಪರಿವೀಕ್ಷಕರು |
| 16 | ಶ್ರೀ ಹರೀಶ್, ಮಾರ್ಷಲ್ |
| 17 | ಶ್ರೀ ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ:**

- ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಗಳು ಪ್ರತಿದಿನ 200 ಜನರಿಗೆ ವ್ಯಾಕ್ಸಿನೇಷನ್‌ನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ವ್ಯಾಕ್ಸಿನೇಷನ್ ಅಭಾವ ಉಂಟಾಗುತ್ತಿದೆ ಎಂದು ತಿಳಿಸಿದರು. ವ್ಯಾಕ್ಸಿನೇಷನ್‌ನ ಸರಬರಾಜು ಇಲ್ಲವೆಂದು ತಿಳಿಸಿದರು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಸಭೆಯಲ್ಲಿ ಹಾಜರಿದ್ದ ಆರೋಗ್ಯ ಇಲಾಖೆಯ ಅಧಿಕಾರಿಗಳು ಪ್ರತಿದಿನ ಮನೆ ಮನೆಗಳಿಂದ ಘನತ್ಯಾಜ್ಯ ಶೇಖರಣೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆಂದು ತಿಳಿಸಿದರು. 17 ಪೌರಕಾರ್ಮಿಕರು (ಖಾಯಂ) 10 ಮಂದಿ ಪೌರಕಾರ್ಮಿಕರು ನಿವೃತ್ತಿ ಹೊಂದಿದ್ದು, ಉಳಿದ 7 ಮಂದಿ ಪೌರಕಾರ್ಮಿಕರಲ್ಲಿ 2 ಮಂದಿ ಏಪ್ರಿಲ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿದ್ದು, ವಾರ್ಡ್‌ನ ಕಸ (ಘನತ್ಯಾಜ್ಯ) ನಿರ್ವಹಣೆಯ ಕಾರ್ಯವನ್ನು ನಿರ್ವಹಿಸಲು ಕಷ್ಟವಾಗುವುದೆಂದು 12 ಮಂದಿ ಪೌರಕಾರ್ಮಿಕರನ್ನು ನಿಯೋಜಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬೆಸ್ಕಾಂ:**

- ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ಯಾವುದೇ ದೂರುಗಳಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

**ಬಿಡ್ಲ್ಯೂಎಸ್‌ಎಸ್‌ಬಿ ಇಲಾಖೆ**

- ಸಭೆಯಲ್ಲಿ ಹಾಜರಿದ್ದ ಬಿಡ್ಲ್ಯೂಎಸ್‌ಎಸ್‌ಬಿ ಇಲಾಖೆ ಅಧಿಕಾರಿಗಳಿಗೆ ರೋಡ್ ಕಟ್ಟಿಂಗ್ ಮಾಡುವಾಗ ರಿಟೋರೇಷನ್‌ಗೆ ಬೇಕಾಗುವ ಸಾಮಾಗ್ರಿಗಳೊಂದಿಗೆ ಸ್ಥಳದಲ್ಲಿ ಶೇಖರಿಕೊಂಡು ರಸ್ತೆ ಅಗೆಯುಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬೀದಿ ದೀಪ ವಿಭಾಗ**

- ಸಭೆಯಲ್ಲಿ ಹಾಜರಿದ್ದ, ಬೀದಿ ದೀಪ ವಿಭಾಗದ ಅಧಿಕಾರಿಯವರಿಗೆ ದೂರುಗಳು ಬರುತ್ತಿದ್ದು, ದೂರುಗಳಿಗೆ ಸಂಬಂಧಿಸಿದಂತೆ ಅತೀ ಜರೂರಾಗಿ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಕಂದಾಯ ಇಲಾಖೆ

- ಕಂದಾಯ ಇಲಾಖೆಯ ಅಧಿಕಾರಿಯವರು 86% ಕಂದಾಯ ವಸೂಲಿಯಾಗಿದೆ ಎಂದು ತಿಳಿಸಿದರು ಹಾಗೂ ಕಂದಾಯ ಪಾವತಿದಾರರಿಗೆ ಇ-ಬಿಲ್ ಚಲನ್ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಾಸ್ಕ್:

- ವಾರ್ಡ್‌ನ ಮಾರ್ಷಲ್‌ಗಳಿಗೆ ರೈಲ್ವೆ ಪ್ಯಾರಲೆಲ್ ರಸ್ತೆಯಲ್ಲಿ ಕೋಳಿ ಘನತ್ಯಾಜ್ಯವನ್ನು ತಂದು ಹಾಕುತ್ತಿದ್ದು, ಅಂತವರಿಗೆ ದಂಡ ವಿಧಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್-76
ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

ಅಧ್ಯಕ್ಷರು
ನೋಡಲ್ ಅಧಿಕಾರಿಗಳು, ವಾರ್ಡ್-76
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ